
ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ.) ತುಮಕೂರು
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಶುಭಕೋರುವವರು : ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ)., ತುಮಕೂರು



ವಿವಿಧ ಮಹಿಳಾ ಸ್ವ–ಸಹಾಯ ಸಂಘದ ಮಹಿಳೆಯರಿಂದ ಚಿತ್ರದುರ್ಗದಿಂದ ಆರಂಭವಾಗಿರುವ ಮಧ್ಯ ನಿಷೇಧ ಕಾಲ್ನಡಿಗೆ ಜಾತಾ ಆಂದೋಲನದಲ್ಲಿ ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಫ್‌ಮೆಂಟ್ ಸೊಸೈಟಿ, ಸರ್ಕಾರೇತರ ಸಂಸ್ಥೆಯ ಫದಾದಿಕಾರಿಯಾದ ಶ್ರೀ.ಎನ್.ಪಾಲನೇತ್ರಯ್ಯ, ಮತ್ತು ಶ್ರೀ.ಮೋಹನ್‌ಕುಮಾರ್, ಕಾರ್ಯದರ್ಶಿ, ಶ್ರಿ.ಆನಂದ್ ಎಂ.ಎಸ್, ನಿರ್ದೇಶಕರು, ಶ್ರೀ.ಮಂಜುನಾಥ್, ಸದಸ್ಯರುಗಳು ಭಾಗವಹಿಸಿ, ಜಾತದಲ್ಲಿ ತೊಡಗಿರುವ ಮಳೆಯರಿಗೆ ಊಟೋಪಚಾರ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಸಹಕಾರ ನೀಡಿ ಬೆಂಬಲಿಸಲಾಯಿತು.




## “ಮದ್ಯ ನಿಷೇದ ಆಂದೋಲನ ಪಾದಯಾತ್ರೆ, ತುಮಕೂರಿಗೆ”

ತುಮಕೂರು : ಸಂಪೂರ್ಣ ಮದ್ಯಪಾನ ನಿಷೇದ ಆಂದೋಲನ ಪಾದಯಾತ್ರೆ ಚಿತ್ರದುರ್ಗದಲ್ಲಿ ಕಳೆದ 19ರಂದು ಆರಂಭವಾಗಿ ಗಣರಾಜ್ಯೋತ್ಸವದ ಮುನ್ನಾದಿನ 25ರಂದು ಸಂಜೆ ತುಮಕೂರು ತಲುಪಿ ಕಾಳಿದಾಸ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಸುಮಾರು 2500 ಮಹಿಳೆಯರು ತಂಗಿದ್ದಾರೆ. ಬೆಳಿಗ್ಗೆ 8.00 ಗಂಟೆಗೆ ತುಮಕೂರಿನ ಮುಖ್ಯ ಬೀದಿಗಳಲ್ಲಿ ಪಾದಯಾತ್ರೆ ಮಾಡಿ ಶ್ರೀ ಸಿದ್ದಗಂಗಾ ಮಠಕ್ಕೆ ಹೋಗಿ ಅಲ್ಲಿಂದ ಬೆಂಗಳೂರಿಗೆ ಪಾದಯಾತ್ರೆ ಮುಂದುವರೆಯುವುದು. ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಫ್‌ಮೆಂಟ್ ಸೊಸೈಟಿ (ರಿ) ತುಮಕೂರು ಸಂಸ್ಥೆ, ಮತ್ತು ವಿವಿಧ ಸಂಘ–ಸಂಸ್ಥೆಗಳು ಸೇರಿ ಪಾದಯಾತ್ರೆಗೆ ಸಹಕಾರ ನೀಡಿದ್ದಾರೆ. ಈ ಕಾರ್ಯಕ್ರಮಕ್ಕೆ ತುಮಕೂರಿನಲ್ಲಿ ಶ್ರೀಯುತ.ಯತಿರಾಜು, ಶ್ರೀ.ಎಂ.ಬಸವಯ್ಯ, ಶ್ರೀ.ಆರ್.ವಿ. ಪುಟ್ಟಕಾಮಣ್ಣ, ಶ್ರೀ.ತುಂಗೋಟಿ ನರಸಿಂಹಯ್ಯ ಮುಂತಾದವರು ಚಾಲನೆ ನೀಡಿದ್ದಾರೆ.

ಚಿತ್ರದುರ್ಗದಿಂದ ಬೆಂಗಳೂರಿನತ್ತ ಮದ್ಯ ನಿಷೇಧ ಪಾದಯಾತ್ರೆಯಲ್ಲಿ ಭಾಗವಹಿಸಿರುವ ಹೆಣ್ಣುಮಕ್ಕಳ ಮನದಾಳ

# ಕುಡಿತದ ಕೊರಳಪಟ್ಟಿ ಹಿಡಿದು ನಡಿಗೆ...

• ಸುಮಾ ಬಿ.

ತುಮಕೂರು: 'ಅಣ್ಣ, ತಮ್ಮ, ಎಲ್ಲಾ ಕುಡಿತದಿಂದ್ಲೆ ಸತ್ತೋಗ್ಯಾರ. ತಮ್ಮನ್ ಹೆಂಡ್ತಿ 21 ವರ್ಷದೋಳು, ಎಲ್ಡ್ ಮಕ್ಳಿದಾವ. 12 ವರ್ಷದೋಳಿದ್ದಾಗಿಂದ್ಲು ಕುಡಿತ್ತಿದ್ದ ತಮ್ಮ, 22 ವರ್ಷಕ್ಕೆ ನಮ್ಮನ್ನ ಬಿಟ್ ಹೋದ. ಈಗ ಆ ಮಕ್ಕಳಿಗೆ ಏನ್ ಗಂಡಂದೂ ಅದೇ ಚಾಳಿ. ನಾ ಕೂಲಿ ಮಾಡಿದರಾ ನನ್ ಎಲ್ಡ್ ಮಕ್ಕ ಹೊಟ್ಟೆ ತುಂಬ್ತೈತಿ. ಇಲ್ಲಂದ್ರ ಇಲ್ಲ' ಎಂದು ಕಣ್ಣೀರಾದರು ಹಾವೇರಿ ಜಿಲ್ಲೆ ಹಾನಗಲ್‌ನ ಶಾರದಾ.

ಇಂತಹ ಸಾವಿರಾರು ಮನ ಕಲಕುವ ಮತ್ತು ಕೇಳಿದವರು ಕಣ್ಣೀರಾಗುವ ಕಥೆಗಳು ಪಾದಯಾತ್ರೆ ಹೊರಟವರ ಎದೆಯಲ್ಲಿವೆ. ಅವರೆಲ್ಲರ ಜಪ ಒಂದೇ 'ಸಂಪೂರ್ಣ ಮದ್ಯಪಾನ ನಿಷೇಧ'.

9 ದಿನಗಳಿಂದ ಸತತ 130 ಕಿ.ಮೀ ನಡೆದಿರುವ ಅವರ ಕಾಲುಗಳಿಗೆ ದಣಿವಾಗಿಲ್ಲ. ಆಯಾಸವಾಗಿಲ್ಲ. ಕೆಚ್ಚೆದೆಯಿಂದ ಮಾತನಾಡುತ್ತಿದ್ದ ಅವರ ಕಣ್ಣುಗಳಲ್ಲಿ ತಮ್ಮ ಬೇಡಿಕೆ ಈಡೇರುತ್ತದೆ ಎನ್ನುವ ನಿರೀಕ್ಷೆ ಹೆಚ್ಚಿತ್ತು.

ಹೀಗೆ ಉತ್ತರ ಕರ್ನಾಟಕ ಭಾಗದ ಹೆಣ್ಣು ಮಕ್ಕಳು ಸಾಲುಗಟ್ಟಿದ್ದರು. ಹರಕು ಚಪ್ಪಲಿ ಮೆಟ್ಟಿಕೊಂಡು ತಾಯಿ, ಪತ್ನಿ, ಅಕ್ಕ, ತಂಗಿ, ಸೊಸೆಯರು, ಅತ್ತೆಯಂದಿರು ಹೀಗೆ ಒಂದೇ ಕುಟುಂಬದ ಎಲ್ಲ ಹೆಣ್ಣು ಮಕ್ಕಳೂ ಇಲ್ಲಿದ್ದರು; ಮನೆಯ ಗಂಡಸರ ಕುಡಿತ ದಿಂದಾಗಿ.

'ನಮ್ಮ ಮೂರೂ ಹೆಣ್ಣಕ್ಳು. ಎಲ್ಲಾರು ಮದ್ವಿ ಮಾಡಿ ಕೊಟ್ಟದ್ದೀವಿ. ಇಬ್ರು ಅಳಿಯಂದ್ರೂ ಕುಡ್ದರ ಚಟ ಕಲ್ತಿದ್ದಾರೆ. ತವರು ಮನಿಗೆ ಹೆಂಡತಿ, ಮಕ್ಳನ್ ಕಳ್ಸ್ಯಾರಿ. ಈಗ ಎಲಾ ಮೊಮ್ಮಕ್ಳು ಚಿಕ್ಕ ಹೆಣ್ಮಕ್ಳನ್ ನೋಡ್ಕೊಳ್ಳಾ ಜವಾಬ್ದಾರಿ ನಮ್ದೇ. ನಮ್ ಹೊಟ್ಟೆ ತುಂಬೋದೆ ಕಷ್ಟ ಆಗೈದ. ಇಂತ ಪರಿಸ್ಥಿತಿಯಾಗ ನಾವ್ ಎಲ್ಲಾರನ್ನೂ



ತುಮಕೂರಿಗೆ ಬಂದ ಮದ್ಯ ನಿಷೇಧ ಪಾದಯಾತ್ರೆ ಮುಖ್ಯರಸ್ತೆಯಲ್ಲಿ ಸಾಗಿತು

## 30ಕ್ಕೆ ಮುತ್ತಿಗೆ

ಪುರುಷ ಪ್ರಧಾನ ಸಮಾಜ ಪಕ್ಷಾತೀತವಾಗಿ ಮಹಿಳೆಯರನ್ನು ತುಳಿಯುತ್ತಲೇ ಬಂದಿದೆ. ರಾಜಕಾರಣಿಗಳನ್ನು ಎಚ್ಚರಿಸಲು ಜ. 30ರಂದು ಅಹಿಂಸಾತ್ಮಕ ವಿಧಾನಸೌಧ ಮುತ್ತಿಗೆ ಹಮ್ಮಿಕೊಳ್ಳಲಾಗಿದೆ ಎಂದು ಮದ್ಯ ನಿಷೇಧ ಆಂದೋಲನ ಕರ್ನಾಟಕದ ರಾಜ್ಯ ಸಂಚಾಲನಾ ಸಮಿತಿ ಸದಸ್ಯೆ ಸ್ವರ್ಣಾ ಭಟ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

## ಮಕ್ಕಳನ್ನು ಹೊತ್ತು ಬಂದರು

ಪಾದಯಾತ್ರೆಯಲ್ಲಿ 1 ವರ್ಷದ ಮಗುವಿನಿಂದ 80 ವರ್ಷದ ವೃದ್ಧೆಯರು ಹೆಜ್ಜೆ ಹಾಕುತ್ತಿದ್ದಾರೆ. ಮಕ್ಕಳಿಗೆ ಚಳಿಯಾದಾಗ ಸೆರಗನ್ನೇ ಹೊದಿಸಿ ಬೆಚ್ಚಗೆ ಮಾಡುತ್ತಿದ್ದಾರೆ. ಬಿಸಿಲು ಹೆಚ್ಚಾದಾಗ ಹೆಗಲಿಗೆ ಮಗು ಹಾಕಿಕೊಂಡು ತಲೆಯ ಮೇಲೆ ಸೆರಗು ಮುಚ್ಚುತ್ತಿದ್ದಾರೆ. ಮಕ್ಕಳು ಹಸಿವು ಎಂದಾಗ ಬಾಟಲಿಯ ನೀರು, ಮುಂದಿನ ನಿಲ್ದಾಣ ಬಂದಾಗಲೇ ಊಟ ಎನ್ನುವ ಪರಿಸ್ಥಿತಿ.

ಹೆಂಗ ನೋಡ್ಕಬೇಕು. ನಮ್ ಮಕ್ಕಳ್ಲಿ ದೀಡಿಗೆ ಬೀಳಾಕ ಈ ಹಾಳ್ ಕುಡಿಯಾನ ಕಾರ್ಣ' ಎನ್ನುತ್ತ ಕಣ್ಣಾಲಿಗಳನ್ನು ಸೆರಗಂಚಿನಲ್ಲಿ ಒರೆಸಿಕೊಂಡರು ಶಿಕ್ಕೂರಿನ ಕಸ್ತೂರವ್ವ.

'ಚಳಿಗಾಲದಲ್ಲಿ ಹೊರಟಿದ್ದೀರಿ' ಎನ್ನುವ ಪ್ರಶ್ನೆಗೆ, 'ನಾವ್ ಹೋರಾಟ ಮಾಡ್ಲೇಕು ಅಂತ್ಲೆ ಬಂದ್‌ಬಿಟ್ಟಿವಿ. ಚಳಿ ಇದ್ರೂ ಇರ್ಲಿ, ಉಪವಾಸ ಇದ್ರೂ ಇರ್ಲಿ. ನಮ್ ಗುರಿ ಒಂದ. ಅದು ಈಡೇರ್ಲಿ ಮುಂದಿಂದ್ ಆಮೇಲ್ ನೋಡ್ಕೊಳ್ತಿ' ಎನ್ನುತ್ತಾ ಮೆರವಣಿಗೆಯ ಸಾಲಿಗೆ ನಿಂತರು ರಾಯಚೂರು ಜಿಲ್ಲೆಯ ಮಾನ್ವಿಯ 57 ವರ್ಷದ ಶಿವಮ್ಮ.

'ನಾವ್ ಹೋದಲ್ಲೆಲ್ಲಾ ಯವಸ್ಥೆ ಚನ್ನಾಗ್ ಮಾಡ್ಯಾರ್ರೀ. ಎಲ್ಲ ಕಡೆಯೂ ಮಲಿಕ್ಕೊಳಾಕೆ ಜಾಗ ಕೊಟ್ಟಾರ್ರೀ' ಎಂದು ತೃಪ್ತಿ ವ್ಯಕ್ತಪಡಿಸುತ್ತಿದ್ದರು. ಅವರು ಮಲಗುತ್ತಿದ್ದದ್ದು ಪಾದಯಾತ್ರೆಯ ನಡುವೆ ಸಿಗುವ ಹಳ್ಳಿಯ ಶಾಲೆಯ ಕೊಠಡಿಯಲ್ಲಿ. ಶೌಚಕ್ಕೆ ಹೋಗುತ್ತಿದ್ದುದು ಗದ್ದೆ ಬಯಲಿನಲ್ಲಿ!

'ಒಂಬತ್ತು ದಿನ ಆತು. ಗಾಡಿ ಹತ್ತಿಲ್ಲ. ಆದಿತ್ಯವಾರ ಕಪ್ಪ ಅಗ್ಗಿ ಅಂಗ್ಗಿ (ಮಧ್ಯದ ಅಂಗಡಿ) ಬಂದ್ ಮಾಡ್ತ ನಾವ್ ಮನೆ ಸೇರೋದು. ದಾರಿಲಿ ಮಧ್ಯದ ಅಂಗ್ಡಿ ಕಂಡ್ರು ಅಂದ್ರ ಬೆಂಕಿ ಹಚ್ಚ ಹೋಗಾದು



ಪಾದಯಾತ್ರೆಯಲ್ಲಿ ಬರಿಗಾಲಲ್ಲಿ ನಡೆದ ಕೆಲವು ಮಹಿಳೆಯರು

## ಬರಿಗಾಲಲ್ಲಿ ನಡೆದರು

ಪಾದಯಾತ್ರೆಗೆ ಬಂದಿರುವ ಅದೆಷ್ಟೋ ಹೆಣ್ಣುಮಕ್ಕಳಿಗೆ ಪಾದರಕ್ಷೆ ಖರೀದಿಸಲೂ ಹಣವಿಲ್ಲ. 70ರಿಂದ 80 ಮಂದಿ ಒಂದಷ್ಟು ದೂರ ಬರಿಗಾಲಲ್ಲೇ ನಡೆದಿದ್ದಾರೆ. ಕಲ್ಲಿನ ಚೂರು, ಮುಳ್ಳುಗಳ ನೋವು ಅವರಿಗೆ ತಾಕಲೇ ಇಲ್ಲ. 'ಮನಸ್ಸಿನ ನೋವಿಗಿಂತ ಇದು ದೊಡ್ಡದಲ್ಲ ಬಿಡ್ರಿ' ಎನ್ನುತ್ತಲೇ ಗಾಯವಾಗಿದ್ದ ಕಾಲುಗಳನ್ನು ಮುಚ್ಚಿಕೊಂಡರು ಬೀದರ್ ಜಿಲ್ಲೆ ಹುಮ್ನಾಬಾದ್‌ನ ಸುಮಿತ್ರಮ್ಮ. ಅವರು ಮದುವೆಯಾಗಿ 12 ವರ್ಷಕ್ಕೆ ಕುಡಿತ ಚಟದ ಗಂಡನನ್ನು ಕಳೆದುಕೊಂಡಿದ್ದಾರೆ.

ಬರಿಗಾಲಲ್ಲಿ ನಡೆದು ಬರುತ್ತಿದ್ದವರನ್ನು ಕಂಡ ಸಂಘ ಸಂಸ್ಥೆಗಳ ಸದಸ್ಯರು ಸುಮಾರು 800 ಜೋಡಿ ಪಾದರಕ್ಷೆಗಳನ್ನು ಹೆಣ್ಣುಮಕ್ಕಳಿಗೆ ನೀಡಿದ್ದಾರೆ.

## ಚಿತ್ರದುರ್ಗದಿಂದ ಬೆಂಗಳೂರಿಗೆ ಜಾಥಾ

ಮದ್ಯ ನಿಷೇಧ ಆಂದೋಲನ ಕರ್ನಾಟಕ ಸಂಘಟನೆಯು 'ಬಾ ಬಾಪು' 150ನೇ ವರ್ಷಾಚರಣೆ ಅಂಗವಾಗಿ ರಾಜ್ಯದಲ್ಲಿ ಸಂಪೂರ್ಣ ಮದ್ಯ ನಿಷೇಧಕ್ಕೆ ಒತ್ತಾಯಿಸಿ ಮಹಿಳೆಯರ ನೇತೃತ್ವದಲ್ಲಿ 'ಬೆಂಗಳೂರು ಚಲೋ' ಕಾಲ್ನಡಿಗೆ ಜಾಥಾ ಹಮ್ಮಿಕೊಂಡಿದೆ.

ಚಿತ್ರದುರ್ಗದಿಂದ ಜ.19ಕ್ಕೆ ಹೊರಟ ಪಾದಯಾತ್ರೆ 30ಕ್ಕೆ ಬೆಂಗಳೂರು ತಲುಪಲಿದೆ. ಸುಮಾರು 2 ಸಾವಿರ ಮಹಿಳೆಯರು ಜಾಥಾದಲ್ಲಿ ಭಾಗವಹಿಸಿದ್ದು, ಪ್ರತಿದಿನ 20 ಕಿ.ಮೀ ನಡೆಯುವರು.

ಅವ್ವ್ ಹಣ್ಣಕ್ಗೆ ದ್ಯಾಪ್ತಾಗೇತಿ' ಎನ್ನುತ್ತ ಮುನ್ನುಗ್ಗಿದರು ಗದಗ ಜಿಲ್ಲೆಯ 78 ವರ್ಷದ ಯಲ್ಲವ್ವ. ಅವರ ಮಾತಿನಲ್ಲಿ ನೋವಿನ ಜೊತೆ ಆಕ್ರೋಶ ಇರುತಿತ್ತು. ಬಳ್ಳಾರಿಯ ಕೊಟ್ರಮ್ಮನದು ಇನ್ನೊಂದು ಕಥೆ. ಮೂರು ಮಕ್ಕಳಿರುವ ಅವರಿಗೆ 8 ವರ್ಷದ ಹಿಂದೆ ಪತಿ ಕುಡಿತದ ದಾಸನಾಗಿ ಮನೆ ಬಿಟ್ಟು ಹೋದ. ಮಕ್ಕಳನ್ನು ಸಾಕುವ ಜವಾಬ್ದಾರಿ ಈಗ ಕೊಟ್ರಮ್ಮನದು.

# ಮಹಿಳೆಯರ ಯಾತ್ರೆಗೆ ನಿರ್ಲಕ್ಷ್ಯ

## ಹೋರಾಟಕ್ಕೆ ನಗರದಲ್ಲಿ ಸಂಘ-ಸಂಸ್ಥೆಗಳ ಸಾಥ್ | ಉಪಹಾರ ವ್ಯವಸ್ಥೆ

■ ವಿಜಯವಾಣಿ ಸುದ್ದಿಜಾಲ ತುಮಕೂರು

ರಾಜ್ಯದಲ್ಲಿ ಸಂಪೂರ್ಣ ಮದ್ಯ ನಿಷೇಧಕ್ಕೆ ಆಗ್ರಹಿಸಿ ಚಿತ್ರದುರ್ಗದಿಂದ ಬೆಂಗಳೂರು ಚಲೋ ಪಾದಯಾತ್ರೆ ಮಾಡುತ್ತಿರುವ ಮಹಿಳೆಯರು ಶನಿವಾರ ತುಮಕೂರು ನಗರದಲ್ಲಿ ಸಾಗಿದರು.

ಶಿರಾ ಗೇಟ್ ಕಾಳಿದಾಸ ಕಾಲೇಜು ಆವರಣದಿಂದ ಪಾದಯಾತ್ರೆ ಮುಂದುವರಿಸಿದ ಮಹಿಳೆಯರು ಸಿದ್ಧಗಂಗಾ ಮಠದಲ್ಲಿ ವಾಸ್ತವ್ಯ ಮಾಡಿ, ಭಾನುವಾರ ಬೆಳಗ್ಗೆ ಪಾದಯಾತ್ರೆ ಮುಂದುವರಿಸುವರು.



**85 ವರ್ಷದ ಬಸಮಜ್ಜಿ 7ನೇ ದಿನವಾದ ಶನಿವಾರವೂ ಉತ್ಸಾಹದಿಂದ ಹೆಜ್ಜೆ ಹಾಕಿದರು.**

ಜಿಲ್ಲೆಯ ವಿವಿಧ ಸಂಘ, ಸಂಸ್ಥೆಗಳು, ಸ್ತ್ರೀಶಕ್ತಿ ಗುಂಪಿನ ಪ್ರತಿನಿಧಿಗಳು ಜನಪರ ಹೋರಾಟಕ್ಕೆ ಸಾಥ್ ನೀಡಿದರು. ಬೆಳಗ್ಗೆ ಬೆಳಗುಂಬ ರಸ್ತೆ ಸಾಯಿಬಾಬಾ ಮಂದಿರದಲ್ಲಿ ಮಹಿಳೆಯರಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಸಿದ್ಧಗಂಗಾ ಮಠದಲ್ಲಿ ನಡೆದ ಚಿಂತನಾ ಸಭೆಯಲ್ಲಿ ಮಾತನಾಡಿದ ಸಾಣೆಹಳ್ಳಿ ಶ್ರೀಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮದ್ಯ ಮಾರಾಟದಿಂದ ಹೆಚ್ಚು ಆದಾಯವಿದೆ ಎಂಬುದು ಭ್ರಮೆ ಇದ್ದು, ಸರ್ಕಾರಗಳು ಅನಾಹುತ ಅರಿತು ಮದ್ಯ ನಿಷೇಧಿಸಬೇಕು. ತುಮಕೂರು ಜಿಲ್ಲೆಯ ರಾಜಕಾರಣಿಗಳೂ ಪಾದಯಾತ್ರೆಗೆ ಬೆಂಬಲ ನೀಡಿಲ್ಲ ಎಂದು ಟೀಕಿಸಿದರು.

ರಂಗಕರ್ಮಿ ಪ್ರಸನ್ನ ಮಾತನಾಡಿ, ಬಡ ಜನರಿಗೆ ಮದ್ಯ ಕುಡಿಸಿ, ಆ ಹಣದಲ್ಲಿ ಸರ್ಕಾರ ನಡೆಸುವುದು ದುರಂತ. ಮಹಿಳೆಯರ ಹೋರಾಟವನ್ನು ಉದಾಸೀನತೆಯಿಂದ ನೋಡಿದರೆ ಪರಿಣಾಮ ಎದುರಿಸಬೇಕಿರುತ್ತದೆ ಎಂದರು.

ಗ್ರಾಮೀಣ ಭಾಗದಲ್ಲಿ ಚಳವಳಿಯ ರೂಪದಲ್ಲಿ ಮದ್ಯ ನಿಷೇಧಕ್ಕೆ ಆಗ್ರಹ ಕೇಳಬೇಕು. ಆಂದೋಲನವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು. ಬಡ ಹಾಗೂ ಮಧ್ಯಮ ವರ್ಗದ ಜನರು ಕುಡಿತ ಬಿಡದಿದ್ದರೆ ಉಳಿವಿಲ್ಲ ಎಂದರು.

ಭಾನುವಾರ ಬೆಳಗ್ಗೆ ಸಿದ್ಧಗಂಗಾ ಮಠದಿಂದ ಪಾದಯಾತ್ರೆ ಆರಂಭಿಸಿ, ಆದಿಚುಂಚನಗಿರಿ ಶಾಖಾ ಮಠದಲ್ಲಿ ರಾತ್ರಿ ವಾಸ್ತವ್ಯ ಮಾಡಲಿದ್ದಾರೆ.



ರಾಜ್ಯದಲ್ಲಿ ಸಂಪೂರ್ಣ ಮದ್ಯ ನಿಷೇಧಕ್ಕೆ ಆಗ್ರಹಿಸಿ ಸಾವಿರಾರು ಮಹಿಳೆಯರು ಆರಂಭಿಸಿರುವ 'ಬೆಂಗಳೂರು ಚಲೋ' ಪಾದಯಾತ್ರೆ ಶನಿವಾರ ತುಮಕೂರು ನಗರದ ಮೂಲಕ ಸಾಗಿತು.

**ಮದ್ಯ ನಿಷೇಧಕ್ಕೆ ಆಗ್ರಹಿಸಿ ಮಹಿಳೆಯರು ಪಾದಯಾತ್ರೆ ಆರಂಭಿಸಿದ ಸಂದರ್ಭ ರಾಜಕಾರಣಿಗಳು ರೆಸಾರ್ಟ್ ಯಾತ್ರೆ ಮಾಡಿದ್ದರು. ಜನ ಜಾಗೃತಿಯಿಂದಷ್ಟೇ ಬದಲಾವಣೆ ಸಾಧ್ಯವಿದ್ದು, ಪಾದಯಾತ್ರೆ ಸಾಂಕೇತಿಕವಾಗಿ ತೆಗೆದುಕೊಂಡು ಜ.30ರಂದು ರಾಜ್ಯದ ಎಲ್ಲ ಹಳ್ಳಿಗಳಲ್ಲಿ ಪ್ರತಿಭಟನೆ ನಡೆಯಲಿ.**

| ಶ್ರೀಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾಣೆಹಳ್ಳಿ ಮಠ

**ತಲೆಮಾರಿನ ಜನರ ಹೋರಾಟದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆ. ಪ್ರಜಾರಾಜ್ಯ ನಡೆಯುತ್ತಿದೆ. ಜನರ ಜೀವನ ಹಾಳು ಮಾಡಿ ಸರ್ಕಾರ ನಡೆಸುವುದು ಸರಿಯಲ್ಲ. ಮದ್ಯ ನಿಷೇಧಕ್ಕೆ ಒತ್ತಾಯಿಸಿ ಗಾಂಧಿ ಕೂಡ ಹೋರಾಟ ನಡೆಸಿದ್ದರು. ಈಗ ಮಹಿಳೆಯರ ಹೋರಾಟಕ್ಕೆ ಮನ್ನಣೆ ಕೊಟ್ಟು ಮದ್ಯ ನಿಷೇಧವಾಗಬೇಕು.**

| ಎಚ್.ಎಸ್.ದೊರೆಸ್ವಾಮಿ ಸ್ವಾತಂತ್ರ್ಯ ಹೋರಾಟಗಾರ

# ನಗರಕ್ಕೆ ಕಾಲಿಟ್ಟ ಮದ್ಯ ನಿಷೇಧ ಆಂದೋಲನ ಕಾಲ್ನಡಿಗೆ ಜಾಥಾ

## ಸಾವಿರಾರು ಮಹಿಳೆಯರು ಭಾಗಿ: ಹೋರಾಟ ಬೆಂಬಲಿಸಿದ ಸಂಘ ಸಂಸ್ಥೆಗಳು

ತುಮಕೂರು

ಚಿತ್ರದುರ್ಗದಿಂದ ಆರಂಭವಾಗಿರುವ ಮದ್ಯ ನಿಷೇಧ ಆಂದೋಲನಾ ಜಾಗೃತಿ ಜಾಥಾವು ಶನಿವಾರ ತುಮಕೂರು ನಗರದ ಮೂಲಕ ಹಾದು ಹೋಯಿತು. ಸುಮಾರು 5 ಸಾವಿರಕ್ಕೂ ಹೆಚ್ಚು ಮಹಿಳೆಯರು ಈ ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡಿದ್ದರು.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿಗೆ ಜ.22ರಂದು ರಾತ್ರಿ ಪದಾರ್ಪಣೆ ಮಾಡಿದ ಈ ಜಾಥಾವು 23 ರಂದು ದ್ವಾರಾಳು, ಹಾವರೆಕೆರೆ, ಚಿಕ್ಕನಹಳ್ಳಿ, ದೊಡ್ಡಆಲದಮರದ ಮೂಲಕ ತುಮಕೂರಿನತ್ತ ಆಗಮಿಸಿತು.



24ರಂದು ಸಿ.ಬಿ.ದೇವಸ್ಥಾನದಲ್ಲಿ ವಾಸ್ತವ್ಯ ಹೂಡಿದ್ದರು. 25 ರಂದು ತುಮಕೂರು ಹೊರವಲಯದ ಕಾಳಿದಾಸ ಕಾಲೇಜು ಬಳಿ ವಾಸ್ತವ್ಯ ಹೂಡಿದ್ದರು.

ಜ.26 ರಂದು ತುಮಕೂರು ನಗರದ ಬೆಳಗುಂಬ ರಸ್ತೆಯಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿದ್ದು ಜಾಥಾದಲ್ಲಿ ಪಾಲ್ಗೊಂಡಿದ್ದವರಿಗೆ ಸಾಯಿ ಮಂದಿರದಲ್ಲಿ ಉಪಹಾರದ ವ್ಯವಸ್ಥೆ ಕಲ್ಪಿಸಲಾಗಿತ್ತು. ಅಲ್ಲಿಂದ ಬೆಳಗ್ಗೆ 11 ಗಂಟೆಗೆ ಮೆರವಣಿಗೆ ಆರಂಭವಾಯಿತು. ಮಹಾತ್ಮಗಾಂಧಿ ಕ್ರೀಡಾಂಗಣದ ಮೂಲಕ ಬಿ.ಎಚ್.ರಸ್ತೆ ತಲುಪಿ ಸಿದ್ಧಗಂಗಾ ಮಠಕ್ಕೆ ತಲುಪಿತು. ಈ ಸಂದರ್ಭದಲ್ಲಿ ತುಮಕೂರಿನ ಅನೇಕ ಸಂಘ ಸಂಸ್ಥೆಗಳು, ಮುಖಂಡರುಗಳು ಮಹಿಳೆಯರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಕೆಲವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮದ್ಯ ನಿಷೇಧ ಆಂದೋಲನದ ವಿವಿಧ ಸಂಘಟಕರು ಹಾಗೂ ಗಣ್ಯರಾದ ರಂಗಕರ್ಮಿ ಪ್ರಸನ್ನ, ಹೆಚ್.ಎಸ್. ದೊರಸ್ವಾಮಿ, ರವಿಕೃಷ್ಣರೆಡ್ಡಿ ಹಾಗೂ ಇಲ್ಲಿನ ಮುಖಂಡರುಗಳಾದ ರೈತ ಸಂಘದ ಗೋವಿಂದರಾಜು, ಸಿ.ಯತಿರಾಜು, ಆರ್.ವಿ.ಪುಟ್ಟಕಾಮಣ್ಣ, ಹಿರಿಯ ಗಾಂಧೀವಾದಿಗಳಾದ ತೊಂಡೋಟಿ ನರಸಿಂಹಯ್ಯ, ಎಂ. ಬಸವಯ್ಯ, ಪ್ರಜಾಪ್ರಗತಿ ಸಂಪಾದಕ ಎಸ್. ನಾಗಣ್ಣ, ಕೆ. ದೊರೈರಾಜು, ಬಾ.ಹ.ರಮಾಕುಮಾರಿ, ಡಾ.ಕೆ.ಎಸ್.ಗಿರಿಜಾ, ವಿಜಯ ಆಸ್ಪತ್ರೆಯ ಡಾ. ವಿಜಯ ಕುಮಾರ್, ರೋಟರಿಯ ಆಶಾ ಪ್ರಸನ್ನಕುಮಾರ್ , ನರಸಿಂಹಮೂರ್ತಿ, ವಾಸವಿ ಸಂಘದ ಆರ್.ಎಲ್.ರಮೇಶ್ ಬಾಬು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.

ಮಹಾತ್ಮಗಾಂಧೀಜಿಯವರು ತಮ್ಮ ಬದುಕಿನುದ್ದಕ್ಕೂ ಮದ್ಯ ನಿಷೇಧ ಆಗಬೇಕು, ಮದ್ಯ ಮಾರಾಟದಿಂದ ಬಂದ ಆದಾಯದಲ್ಲಿ ದೇಶ ನಡೆಸಬಾರದೆಂಬ ನಿಲುವು ಹೊಂದಿದ್ದರು. ಸ್ವಾತಂತ್ರ್ಯಾನಂತರ ಹಲವು ಹೋರಾಟಗಳು ನಡೆದವು. ಸಂವಿಧಾನದ ಪರಿಚ್ಛೇದ 47 ರಡಿ ಮದ್ಯಪಾನ ನಿಷೇಧ ಜಾರಿಯೊಂದಿಗೆ ಮಾದಕ ವಸ್ತುಗಳ ಸೇವನೆಯನ್ನೂ ಪ್ರತಿಬಂಧಿಸಬೇಕೆಂದು ಹೇಳಲಾಗಿದೆ. ಆದರೂ ನಾಲ್ಕು ರಾಜ್ಯಗಳು ಮಾತ್ರ ಮದ್ಯ ನಿಷೇಧ ಮಾಡಿದ್ದು ಉಳಿದ ರಾಜ್ಯಗಳು ಅದನ್ನು ಕಡೆಗಣಿಸಿವೆ. ಈ ಸಮಾಜಘಾತುಕ ನೀತಿಯ ಪರಿಣಾಮ ಕಳೆದ 8 ವರ್ಷಗಳಲ್ಲಿ 9000 ಕೋಟಿಯಿಂದ 18000 ಕೋಟಿಗೆ ಅಬಕಾರಿ ಆದಾಯವನ್ನು ಹೆಚ್ಚಿಸಿದ ಕುಖ್ಯಾತಿ ಕರ್ನಾಟಕದ್ದಾಗಿದೆ ಎಂದು ತಿಳಿಸಿದರು.

ಮದ್ಯ ನಿಷೇಧಕ್ಕೆ ಆಗ್ರಹಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಮೂರು ಸಾವಿರಕ್ಕೂ ಹೆಚ್ಚು ಮಹಿಳೆಯರು ಚಿತ್ರದುರ್ಗದಿಂದ ಕಾಲ್ನಡಿಗೆ ಜಾಥಾ ಆರಂಭಿಸಿದರು. ಮಹಾತ್ಮಗಾಂಧೀಜಿ ಹುತಾತ್ಮರಾದ ದಿನ ಜ.30 ರಂದು ಬೆಂಗಳೂರಿಗೆ ತಲುಪಿ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡರುಗಳು ತಿಳಿಸಿದರು.

**ಅಪರಾಧ ವರದಿ ಹೇಳುವಂತೆ ಮದ್ಯ ಸೇವನೆ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದೇ ಕಾರಣಕ್ಕಾಗಿ ಶೇ.70 ರಷ್ಟು ಕೊಲೆಯಂತಹ ಹಿಂಸೆಗಳು ನಡೆಯುತ್ತಿವೆ. ಬಡತನಕ್ಕೆ ಮುಖ್ಯ ಮೂರು ಕಾರಣಗಳಲ್ಲಿ ಮದ್ಯಪಾನವೂ ಒಂದಾಗಿದೆ. ಮಕ್ಕಳು ಶಾಲೆ ಬಿಡುವುದು, ಶಿಕ್ಷಣದಲ್ಲಿ ಆಸಕ್ತಿ ತೋರಿಸದೆ ಇರುವುದಕ್ಕೆ ಇದೊಂದು ಕಾರಣ. ಮದ್ಯಪಾನದಿಂದ ಕುಟುಂಬಗಳು ಬೀದಿಪಾಲಾಗುತ್ತಿದ್ದು, [illegible] ಮಕ್ಕಳ ಮನಸ್ಸಿನ ಮೇಲೆ ತೀವ್ರ ದುಷ್ಪರಿಣಾಮವನ್ನುಂಟು ಮಾಡುತ್ತಿದೆ ಎಂಬುದು ಮದ್ಯ ನಿಷೇಧ ಆಂದೋಲನದ ಪ್ರತಿಪಾದನೆ.**


ಹೊಸಬೆಳಕು ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಶುಭಕೋರುವವರು : ಶ್ರೀ ಡಿ.ಆರ್. ರಾಘವೇಂದ್ರ ಗುಪ್ತ, ಮುಖ್ಯ ಟ್ರಸ್ಟಿ, ಹೊಸಬೆಳಕು ಹೊಸಬದುಕು ಸಂಸ್ಥೆ (ರಿ)., ತುಮಕೂರು.


ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಫ್‌ಮೆಂಟ್ ಸೊಸೈಟಿ (ರಿ.) ತುಮಕೂರು
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಶುಭಕೋರುವವರು : ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಫ್‌ಮೆಂಟ್ ಸೊಸೈಟಿ (ರಿ)., ತುಮಕೂರು


ಹೊಸಬೆಳಕು ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಶುಭಕೋರುವವರು : ಶ್ರೀ ಡಿ.ಆರ್. ರಾಘವೇಂದ್ರ ಗುಪ್ತ, ಮುಖ್ಯ ಟ್ರಸ್ಟಿ, ಹೊಸಬೆಳಕು ಹೊಸಬದುಕು ಸಂಸ್ಥೆ (ರಿ.), ತುಮಕೂರು.
ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಫ್‌ಮೆಂಟ್ ಸೊಸೈಟಿ (ರಿ.) ತುಮಕೂರು
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಶುಭಕೋರುವವರು : ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಫ್‌ಮೆಂಟ್ ಸೊಸೈಟಿ (ರಿ)., ತುಮಕೂರು


ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
ಮುಕ್ತ ಕರ್ನಾಟಕ"
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
"ಪಾನ ಮುಕ್ತ ಕರ್ನಾಟಕ"
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019


ಹೊಸಬೆಳಕು ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ.) ತುಮಕೂರು
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019


ಹೊಸಬೆಳಕು ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ.) ತುಮಕೂರು
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಶುಭಕೋರುವವರು : ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ)., ತುಮಕೂರು


ಹೊಸಬೆಳಕು ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019


ಮದ್ಯಪಾನ ತ್ಯಜಿಸಿ
ಆರೋಗ್ಯ ಉಳಿಸಿ
ಹೊಸಬೆಳಕು ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019


ರಾಷ್ಟ್ರೀಯ ಸೇವಾ ಯೋಜನಾ
ಭಾರತೀಯ ವೈದ್ಯಕೀಯ ಸಂಘ
ತುಮಕೂರು ಶಾಖೆ
ಮದ್ಯಪಾನ ತ್ಯಜಿಸಿ
ಆರೋಗ್ಯ ಉಳಿಸಿ
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಶುಭಕೋರುವವರು : ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ)., ತುಮಕೂರು
ಹೊಸಬೆಳಕು ಹೊಸಬದುಕು (ರಿ)., ತುಮಕೂರು.
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಾಲ್ನಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019


ಸಾವಿರಾರು ಮಹಿಳೆಯರ ನೇತೃತ್ವದಲ್ಲಿ
ಬೆಂಗಳೂರು ಚಲೋ...
ಮದ್ಯ ನಿಷೇಧ ಆಂದೋಲನ ಕರ್ನಾಟಕ
9444778773, 9480312074, 9449744740, 974021764
ಮದ್ಯ ನಿಷೇಧ ಆಂದೋಲನ ಕರ್ನಾಟಕ
ಹೆಂಡ ಸರಾಯಿ ಸಹವಾಸ, ಹೆಂಡತಿ ಮಕ್ಕಳ ಉಪವಾಸ.
ಮದ್ಯಪಾನ ನಿಷೇಧಿಸಿ, ಕುಟುಂಬಗಳನ್ನು ರಕ್ಷಿಸಿ.
ತುಮಕೂರು ಶಾಖೆ
ಮದ್ಯಪಾನ


ಹೆಂಡ ಸರಾಯಿ ಸಹವಾಸ, ಹೆಂಡತಿ ಮಕ್ಕಳ ಉಪವಾಸ.
ಮದ್ಯಪಾನ ನಿಷೇಧಿಸಿ, ಕುಟುಂಬಗಳನ್ನು ರಕ್ಷಿಸಿ
ಭಾರತೀಯ ವೈದ್ಯಕೀಯ ಸಂಘ
ತುಮಕೂರು ಶಾಖೆ
ಇವರ ವತಿಯಿಂದ
"ಪಾನ ಮುಕ್ತ ಕರ್ನಾಟಕ"
ಮಹಿಳೆಯರಿಂದ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಚಿತ್ರದುರ್ಗದಿಂದ ಆರಂಭವಾಗಿರುವ
ಕಲ್ಪಡಿಗೆ ಜಾಥಾ ಆಂದೋಲನದ ಪಾದಯಾತ್ರೆ
ಕಾರ್ಯಕ್ರಮಕ್ಕೆ ಸುಸ್ವಾಗತ
ದಿನಾಂಕ : 25-01-2019
ಹೊಸಬೆಳಕು ಹೊಸಬದು

